**ಸಾಕ್ಷಿಗೆ ದಿನಾಂಕಃ 06.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ ಎನ್ ಎಂ ಪಿ ವಕೀಲರಿಂದಃ**

1. ಅರ್ಜಿದಾರರಿಗೆ ನಾನು ಮೂಲತಃ ಚಿಕಿತ್ಸೆ ನೀಡಿದ ವೈದ್ಯನಾಗಿರುವುದಿಲ್ಲ. ಅರ್ಜಿದಾರರನ್ನು ದೈಹಿಕ ಅಂಗನ್ಯೂನತೆಯನ್ನು ನಿರ್ಧರಿಸುವ ಸಲುವಾಗಿ ಮಾತ್ರ ಪರೀಕ್ಷೆ ಮಾಡಿರುತ್ತೇನೆ ಎಂದರೆ ಸರಿ. ಅರ್ಜಿದಾರರಿಗೆ ಸಂಬಂಧಿಸಿದ ಡಿಸ್ಚಾರ್ಜ್ ಸಮ್ಮರಿ ಮತ್ತು ಗಾಯದ ಪ್ರಮಾಣಪತ್ರ ಮಾತ್ರ ನೋಡಿರುತ್ತೇನೆ. ಡಿಸ್ಚಾರ್ಜ್ ಸಮ್ಮರಿಯ ಪ್ರಕಾರ ಅರ್ಜಿದಾರರು ಆಸ್ಪತ್ರೆಯಿಂದ ಬಿಡುಗಡೆಯಾಗುವಾಗ ಆರೋಗ್ಯವಾಗಿದ್ದರು ಎಂದರೆ ಸರಿಯಲ್ಲ. ನಾನು ಅರ್ಜಿದಾರರು ಚಿಕಿತ್ಸೆ ಪಡೆದ ಆಸ್ಪತ್ರೆಯಿಂದ ಅಭಿಪ್ರಾಯ ಸಂಗ್ರಹಿಸಿರುವುದಿಲ್ಲ. ನಾನು ನಮ್ಮ ವೈದ್ಯಕೀಯ ಮಂಡಳಿಯ ಸದಸ್ಯನಾಗಿರುವುದಿಲ್ಲ. ನಾನು ವೈದ್ಯಕೀಯ ಮಂಡಳಿಯಿಂದ ಅರ್ಜಿದಾರರಿಗೆ ಸಂಬಂಧಿಸಿದಂತೆ ಅಭಿಪ್ರಾಯ ಪಡೆದಿಲ್ಲ.

2. ಅರ್ಜಿದಾರರಿಗೆ ಉಂಟಾದ ಒಳಗಾಯಗಳು ವಾಸಿಯಾಗಿವೆ ಎಂದರೆ ಸರಿಯಲ್ಲ. ಅರ್ಜಿದಾರರು ಮುಂದುವರೆದ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ, ಆದರೆ ನಿಪಿ.13 ರ ದಾಖಲೆಯನ್ನು ನನಗೆ ತೋರಿಸಿರುತ್ತಾರೆ. ನಿಪಿ.13 ರಲ್ಲಿ ವೈದ್ಯರ ಮಾಹಿತಿ, ಆಸ್ಪತ್ರೆಯ ಮಾಹಿತಿ ಇಲ್ಲ ಎಂದರೆ ವೈದ್ಯರ ಹೆಸರು ಪ್ರಿಯಾಂಕ ಎಂದು ನಮೂದಾಗಿದೆ. ನಿಪಿ.13 ರಲ್ಲಿ ನಮೂದಾಗಿರುವ ವೈದ್ಯರ ತಂಡದಲ್ಲಿ ವೈದ್ಯರ ಹೆಸರು ಪ್ರಿಯಾಂಕ ಎಂದು ನಮೂದು ಇಲ್ಲ ಎಂದರೆ ಕಿರಿಯ ವೈದ್ಯರಾಗಿರಬಹುದು. ದಿಃ19.04.2023 ರಂದು ಅರ್ಜಿದಾರರು ಮುಂದುವರೆದ ಚಿಕಿತ್ಸೆಗೆ ಹೋಗಿರುವುದಿಲ್ಲ ಹಾಗೂ ನಿಪಿ.13 ಸೃಷ್ಟಿತ ದಾಖಲೆ ಎಂದರೆ ಸರಿಯಲ್ಲ.

3. ಅರ್ಜಿದಾರರ ಜಿ ಸಿ ಎಸ್ ಸ್ಕೋರ್ ಸಾಮಾನ್ಯವಾಗಿದೆ ಎಂದರೆ ಸರಿ ಆದರೆ ಬೇರೆ ತೊಂದರೆಗಳು ಇರುತ್ತವೆ. ನಾನು ಅರ್ಜಿದಾರರಿಗೆ ಸಂಬಂಧಿಸಿದ ನರನ್ಯೂನತೆಯ ಬಗ್ಗೆ ಮಾತ್ರ

ಹೇಳುತ್ತಿದ್ದೇನೆ. ಅರ್ಜಿದಾರರು ಭೌತಿಕ ಚಿಕಿತ್ಸೆ ಪಡೆಯುತ್ತಿರುವ ಬಗ್ಗೆ ಮೌಖಿಕವಾಗಿ ಹೇಳಿರುತ್ತಾರೆ. ಅರ್ಜಿದಾರರ ತಲೆಗೆ ಶಸ್ತ್ರಚಿಕಿತ್ಸೆ ಆಗಿಲ್ಲ ಎಂದರೆ ಸರಿ. ಅರ್ಜಿದಾರರ ವೃತ್ತಿಯ ಬಗ್ಗೆ ಅರ್ಜಿದಾರರ ಜೊತೆ ಬಂದಂತಹ ವ್ಯಕ್ತಿ ಮೌಖಿಕವಾಗಿ ತಿಳಿಸಿರುತ್ತಾರೆ. ಅರ್ಜಿದಾರರ ಜ್ಞಾಪನ ಶಕ್ತಿಯಲ್ಲಿ ವೃದ್ದಿಯಾಗಿದೆ ಎಂದರೆ ಅಪಘಾತದ ಸಮಯಕ್ಕೂ ಮತ್ತು ಈಗಿನ ಸಮಯಕ್ಕೂ ತಾಳೆ ನೋಡಿದರೆ ವೃದ್ಧಿಯಾಗಿರುತ್ತದೆ. ಅರ್ಜಿದಾರರಿಗೆ ಸಂಬಂಧಿಸಿದ ಈ ಪ್ರಕರಣದಲ್ಲಿ ನೀಡಿರುವ ಸಾಕ್ಷ್ಯಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

4. ಅರ್ಜಿದಾರರ ಬುದ್ದಿಮತ್ತೆಯನ್ನು ಪರೀಕ್ಷಿಸುವ ಪರಿಸ್ಥಿತಿಯಲ್ಲಿಲ್ಲ. ಅರ್ಜಿದಾರರಿಗೆ ಕೇಳಲಾದ ಪ್ರಶ್ನೆಗಳಿಗೆ ಎಷ್ಟು ಉತ್ತರಗಳನ್ನು ನೀಡಿದ್ದಾರೆ ಎಂದು ನನ್ನ ವರದಿಯಲ್ಲಿ ಹೇಳಿರುತ್ತೇನೆ. ಅರ್ಜಿದಾರರಿಗೆ ಕುಂಠಿತವಾದ ಬುದ್ದಿಮತ್ತೆ ಮುಂದೆ ಸುಧಾರಣೆಯಾಗುವ ಸಾಧ್ಯತೆ ಇದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ನಿಮಾನ್ಸ್ ಆಸ್ಪತ್ರೆಯ ನಿಯಾಮಾವಳಿಗಳನ್ನು ಅನ್ವಯಿಸಿ ಪರೀಕ್ಷೆ ಮಾಡಿರುವುದಿಲ್ಲ ಎಂದರೆ ಸರಿ. ಅರ್ಜಿದಾರರ ಐಡಿಯಾಗೆ ಸಂಬಂಧಿಸಿದಂತೆ 40-70% ಅಂಗನ್ಯೂನತೆಯನ್ನು ನೀಡಲಾಗಿದೆ. ಡಾ.ಜಯಂತಿ ಮನೋತಜ್ಞರಿಗೆ ಅರ್ಜಿದಾರರನ್ನು ಕಳುಹಿಸಿಕೊಡಲಾಗಿತ್ತು. ನಿಪಿ.23 ರಲ್ಲಿ ವರ್ಕ್ ಶೀಟ್ ಲಗತ್ತಿಸಲಾಗಿಲ್ಲ ಎಂದರೆ ಸರಿ.

5. ಅರ್ಜಿದಾರರು ದಿನನಿತ್ಯದ ಕೆಲಸಗಳನ್ನು ಮಾಡಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿದಾರರ ದೈಹಿಕ ಅಂಗನ್ಯೂನತೆಯನ್ನು ಮಾತ್ರ ನಿರ್ಧರಿಸಿರುತ್ತೇನೆ. ಅರ್ಜಿದಾರರಿಗೆ ಭೌತಿಕ ಚಿಕಿತ್ಸೆ ಪಡೆಯಲು ಸಲಹೆ ನೀಡಿರುತ್ತೇನೆ. ಅರ್ಜಿದಾರರು ಭೌತಿಕ ಚಿಕಿತ್ಸೆ ಪಡೆದರೆ ಅವರ ದೈಹಿಕ ಅಂಗನ್ಯೂನತೆಯು ಕಡಿಮೆಯಾಗಬಹುದು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ನಿಗಧಿತ ಅಂಗಕ್ಕೆ ನೀಡಲಾದ ಅಂಗನ್ಯೂನತೆಯ ಶೇ.1/4 ರಷ್ಟು ಭಾಗವನ್ನು ಸಂಪೂರ್ಣ ದೇಹಕ್ಕೆ ಅಳವಡಿಸಬೇಕು ಎಂದರೆ ಸರಿಯಲ್ಲ. ಕೇಂದ್ರ ಸರ್ಕಾರದ 2018 ರ

ಮಾರ್ಗಸೂಚಿಯನ್ನು ಅನ್ವಯಿಸಿರುತ್ತೇನೆ. ಕೇಂದ್ರ ಸರ್ಕಾರದ ಮಾರ್ಗ ಸೂಚಿಯ ಅನ್ವಯ ಅರ್ಜಿದಾರರಿಗೆ ನಾನು ನೀಡಲಾಗಿರುವ ಅಂಗನ್ಯೂನತೆ ಉಂಟಾಗಲಾರದು ಎಂದರೆ ಸರಿಯಲ್ಲ.

6. ಅರ್ಜಿದಾರರಿಗೆ ಉಂಟಾದ ಮೂಳೆಮುರಿತಗಳನ್ನು ಸೇರಿಸಿ ಅಂಗನ್ಯೂನತೆಯನ್ನು ನಿರ್ಧರಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದ ಕೊನೆಯ 2 ಸಾಲಿನಲ್ಲಿ ಹೇಳಿದ ಸಂಗತಿಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.21 ರಿಂದ 24 ದಾಖಲೆಗಳು ಸೃಷ್ಟಿತ ದಾಖಲೆಗಳು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ, ಅವರಿಗೆ ಹೆಚ್ಚಿನ ಪರಿಹಾರ ಸಿಗಲಿ ಎಂದು ಹೆಚ್ಚಿನ ಅಂಗನ್ಯೂನತೆಯನ್ನು ನಿರ್ಧರಿಸಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1ನೇ ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರು. ಆದ್ದರಿಂದ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)**

**(ಓ.ಹೇ.ಕೇ.ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**